2. ಪ್ರಕಟಣೆ :

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು ದಿನಾಂಕ: 12.12.2012ರಂದು ಈ ಕೆಳಗಿನ ವಿಧೇಯಕಗಳನ್ನು ಯಾವುದೇ ತಿದ್ದುಪಡಿ ಇಲ್ಲದೇ ಅಂಗೀಕರಿಸಲಾಗಿದೆಯೆಂದು ತಿಳಿಸಿರುತ್ತಾರೆ.

1. ಕರ್ನಾಟಕ ವಿಧಾನಮಂಡಲದವರ ವೇತನ, ನಿವೃತ್ತಿ ವೇತನ, ನಿವೃತ್ತಿ ವೇತನಗಳು ಮತ್ತು ಭತ್ಯೆಗಳು (ಎರಡನೇ ತಿದ್ದುಪಡಿ) ವಿಧೇಯಕ, 2012.
2. ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ಮೂರನೇ ತಿದ್ದುಪಡಿ) ವಿಧೇಯಕ, 2012
3. ಕರ್ನಾಟಕ ಲಿಫ್ಟ್‌ಗಳ ಎಸ್ಕಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನ್ವೇಯರ್‌ಗಳ ವಿಧೇಯಕ 2012

3. ಕೃಷ್ಣಾ ಯೋಜನೆಯ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಲು ಸದನವನ್ನು ಒಂದು ದಿವಸ ಮುಂದುವರೆಸುವ ಬಗ್ಗೆ ಮನವಿ :

ಶ್ರೀ ಸಿದ್ಧರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಇವತ್ತು ಗುರುವಾರ, ಸದನ ನಡೆಯುವ ಕೊನೆಯ ದಿವಸವಾಗಿರುವುದರಿಂದ ಎಲ್ಲರೂ ಹೊರಡುವ ಮೂಡ್‌ನಲ್ಲಿರುತ್ತಾರೆ. ತಾವು ಅಧಿವೇಶನವನ್ನು ಇನ್ನು ಒಂದು ದಿವಸ extend ಮಾಡಿದರೆ ಬಹಳ ಅನುಕೂಲವಾಗುತ್ತದೆ. ಏಕೆಂದರೆ, ಅನೇಕ ಬಿಲ್‌ಗಳು ಇವೆ. ಎರಡನೆಯದಾಗಿ, ತಾವು ನಿಯಮ 69ಕ್ಕೆ convert ಮಾಡಿರುವಂಥ ವಿಷಯಗಳು ಸಹ complete ಆಗಿಲ್ಲ. ಇವತ್ತು ಒಂದೇ ದಿವಸದಲ್ಲಿ 52 Calling Attentionಗಳು ಇವೆ ಉತ್ತರ ಭಾಗದಲ್ಲಿ ಕೃಷ್ಣಾ ಬಗ್ಗೆ ನಾವು ಚರ್ಚೆ ಮಾಡಿ ಇದು ಅಪೂರ್ಣವಾಗಿದ್ದು, ಇದಕ್ಕೆ ಉತ್ತರವನ್ನು

ಕೊಡದೇ ಹೊರಟು ಹೋದರೆ ನಮಗೆಲ್ಲಾ ಕೆಟ್ಟ ಹೆಸರು ಬರುತ್ತದೆ. ಈ ಭಾಗದ ಜನರಲ್ಲಿ ಕೆಟ್ಟ ಅಭಿಪ್ರಾಯ ಮೂಡುವುದಕ್ಕೆ ಕಾರಣವಾಗುತ್ತದೆ. ಆ ಕಾರಣದಿಂದ ತಮಗೆ ನನ್ನ ಒಂದು ಸಲಹೆ ಏನೆಂದರೆ, ನಾಳೆ ಒಂದು ದಿವಸ ಅಸೆಂಬ್ಲಿ ನಡೆಯಲಿ. ಬಿಲ್‌ಗಳನ್ನೆಲ್ಲಾ ನಾಳೆ ಹಾಕಿಕೊಳ್ಳೋಣ. ಮೊದಲನೆಯದಾಗಿ, ಇವುಗಳನ್ನೆಲ್ಲಾ ಚರ್ಚೆ ಮಾಡಿ ಮುಗಿಸೋಣ. ಎರಡನೆಯದಾಗಿ, ನಿನ್ನೆ ದಿವಸ ಲೇಟ್ ಆಗಿ ಸಿಎಜಿ ರಿಪೋರ್ಟ್ ಬಂದಿದೆ. ಈ CAG Report ನಲ್ಲಿ ಅಕ್ರಮ ಗಣಿಗಾರಿಕೆಯಲ್ಲಿ ಕೋಟ್ಯಾಂತರ ರೂಪಾ ಯಿಗಳು ಸರ್ಕಾರಕ್ಕೆ ನಷ್ಟವಾಗಿದೆ ಎಂದು ಬಂದಿದೆ. ಸಿಎಜಿ ರಿಪೋರ್ಟ್‌ನಲ್ಲಿ 2006-07 ರಿಂದ 2011-12 ರವರೆಗೂ, ಈ 5 ವರ್ಷಗಳಲ್ಲಿ ಅಕ್ರಮ ಗಣಿಗಾರಿಕೆಯ ಬಗ್ಗೆ ಮಾನ್ಯ ಸಂತೋಷ್ ಹೆಗ್ಡೆಯವರು ಕೊಟ್ಟಿರುವಂಥ ವರದಿಯನ್ನು ಬಿಟ್ಟು, ಮತ್ತೆ ಸಿಬಿಐನವರು ಕೊಟ್ಟಿರುವಂಥ ವರದಿಯನ್ನು ಬಿಟ್ಟು ಮಾಡಿದ್ದಾರೆ. ಇದರಿಂದ ಕೋಟ್ಯಾಂತರ ರೂಪಾಯಿಗಳು ಸರ್ಕಾರದ ಬೊಕ್ಕಸಕ್ಕೆ ಇವತ್ತು ನಷ್ಟವಾಗಿದೆ. ಇಲ್ಲಿ ಯಾರ್‍ಯಾರು ನಷ್ಟ ಮಾಡಿದ್ದಾರೆ? ಇದು ಯಾರ ಕಾಲದಲ್ಲಿ ಆಯಿತು? ಹೇಗೆ ನಷ್ಟವಾಯಿತು? ಇದಕ್ಕೆ ಯಾರ್‍ಯಾರು ಜವಾಬ್ದಾರರು, ಇದರ ಬಗ್ಗೆ ಚರ್ಚೆ ಮಾಡಿ, ನಾವು ಅವರಿಗೆ ಜವಾಬ್ದಾರಿಯನ್ನು ನಿಗದಿ ಮಾಡಬೇಕಾಗುತ್ತದೆ. ಇದು ಸರ್ಕಾರಕ್ಕೆ ಬರಬೇಕಾದಂಥ ಹಣವಾಗಿದೆ. ಇಲ್ಲಿ ಸದನ ನಡೆಸಿ ಅದರ ಬಗ್ಗೆ ಚರ್ಚೆಯಾಗದೇ ಹೋದರೆ, ಮತ್ತೆ ಮುಂದಿನ ಸದನ ಯಾವಾಗ ನಡೆಯುತ್ತದೆಂದು ಹೇಳುವುದಕ್ಕೆ ಬರುವುದಿಲ್ಲ, ಅಥವಾ ಚುನಾವಣೆ ಬಂದು ಬಿಡುತ್ತದೋ, ಇದು ಆಗುತ್ತದೆಯೋ ಇಲ್ಲವೋ ಎನ್ನುವ ಬಗ್ಗೆ ಸ್ಪಷ್ಟತೆ ಇಲ್ಲ.

ಇನ್ನೊಂದು ವಿಚಾರವೆಂದರೆ, de-notification ಗಳಾಗಿವೆ. de-notification ಮಾಡಿ ಬಿ.ಡಿ.ಎ.ಗೆ ಕೋಟ್ಯಾಂತರ ರೂಪಾಯಿಗಳನ್ನು ನಷ್ಟ ಮಾಡಿದ್ದಾರೆ. ಅದನ್ನು ಅಕ್ರಮವಾಗಿ ಮಾಡಿದ್ದಾರೆ ಎಂದು ವರದಿಯನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಕಾನೂನನ್ನು ಉಲ್ಲಂಘನೆ ಮಾಡಿ, ಕಾನೂನನ್ನು ಗಾಳಿಗೆ ತೂರಿ ಮಾಡಿದ್ದಾರೆ ಎಂದೆಲ್ಲಾ ಬಂದಿದೆ. ಇದರ ಬಗ್ಗೆಯೂ ಕೂಡ ಚರ್ಚೆಯಾಗಬೇಕಾಗುತ್ತದೆ. ಸದನದಲ್ಲಿ ಚರ್ಚೆಯಾಗ

ಬೇಕು, ಸರ್ಕಾರದ ಅದಕ್ಕೆ ಉತ್ತರ ಕೊಡಬೇಕು. ಇದಕ್ಕೆ ಜವಾಬ್ದಾರರ್ಯಾರು, ತಪ್ಪಿತಸ್ಥರ್ಯಾರು, ಕಾರಣಕರ್ತರ್ಯಾರು ಎನ್ನುವುದನ್ನು ಪತ್ತೆ ಮಾಡಬೇಕಾಗುತ್ತದೆ. ಅದರ ಬಗ್ಗೆ ತನಿಖೆಯಾಗಬೇಕಾಗುತ್ತದೆ. ಇದೆಲ್ಲವನ್ನು ಮಾಡಲು ಸಮಯ ಸಾಲುವುದಿಲ್ಲ. ಅದನ್ನು ನಾವು ಇವತ್ತು ನೋಟಿಸ್ ಮೂಲಕ ತೆಗೆದುಕೊಂಡು ಬಂದರೆ ನಾಳೆ ಚರ್ಚೆ ಮಾಡಬಹುದು. ಅದಕ್ಕಾಗಿ ದಯವಿಟ್ಟು ಅಧಿವೇಶನವನ್ನು ಒಂದು ದಿನ ಮುಂದಕ್ಕೆ ಹಾಕಬೇಕಾಗಿ ನನ್ನ ಸೂಚನೆ. ದಯವಿಟ್ಟು ತಾವು ತಮ್ಮ ಅಧಿಕಾರವನ್ನು ಉಪಯೋಗಿಸಿ, ನಾಳೆ ಒಂದು ದಿನ ಅಧಿವೇಶನವನ್ನು ನಡೆಸೋಣ ಎಂದು ಸರ್ಕಾರಕ್ಕೆ ಹೇಳಬೇಕು. ಏಕೆಂದರೆ ಬೆಳಗಾವಿಗೆ ಬಂದು ಸದನ ನಡೆಸಿ ಕೆಲವು ಪ್ರಮುಖ ವಿಚಾರಗಳನ್ನು ಚರ್ಚೆ ಮಾಡದೇ ಹೋದರೆ, ಅದರ ಬಗ್ಗೆ ನಿರ್ಣಯಗಳಾಗದೇ ಹೋದರೆ ಇಲ್ಲಿ ಅಸೆಂಬ್ಲಿ ನಡೆಸಿಯೂ ಏನು ಪ್ರಯೋಜನ? ಇಲ್ಲಿ ದಿನಕ್ಕೆ ಎರಡು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಹೀಗೆ ಎರಡು ಕೋಟಿ ಖರ್ಚು ಮಾಡಿಯೂ ಉಪಯೋಗವೇನಾಗುತ್ತದೆ? 400 ಕೋಟಿ ಖರ್ಚು ಮಾಡಿ ಇಲ್ಲಿ ಸದನವನ್ನು ಕಟ್ಟಿದ್ದಾರೆ, ಬೆಳಗಾವಿಗೆ ಹೋಗಿ ಸುವರ್ಣ ಸೌಧದಲ್ಲಿ ಮೊದಲನೇ ಬಾರಿಗೆ ಸದನ ನಡೆಸುತ್ತಿದ್ದಾರೆ. ಎಂದು ಇಡೀ ರಾಜ್ಯದ ಜನ, ವಿಶೇಷವಾಗಿ ಉತ್ತರ ಕರ್ನಾಟಕದ ಜನ ನೋಡುತ್ತಿದ್ದಾರೆ. ಅದಕ್ಕೋಸ್ಕರ ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ, ನಾಳೆಯೂ ಒಂದು ದಿನ ಸದನವನ್ನು ನಡೆಸಿ, ಚರ್ಚೆ ಮಾಡೋಣ. ಸರ್ಕಾರ ಕನಿಷ್ಠ ಪಕ್ಷವೆಂದರೂ 15 ದಿವಸ ಚಳಿಗಾಲದ ಅಧಿವೇಶನವನ್ನು ನಡೆಸಬೇಕಾಗಿತ್ತು. ನಿಮಗೆ ಗೊತ್ತಿದೆ, ಈ ವರ್ಷ ಸದನ ನಡೆದಿರುವುದೇ 26 ದಿವಸ. ಅದಕ್ಕೆ ಈಗ ನಡೆದಿರುವ 7 ದಿವಸಗಳನ್ನು ಸೇರಿಸಿದರೆ 33 ದಿನಗಳಾಗುತ್ತದೆ. ಒಂದು ವರ್ಷಕ್ಕೆ 33 ದಿನಗಳು ಸಾಕೇ? It is 50% of the agreed days. ಕನಿಷ್ಠ ಪಕ್ಷ ವರ್ಷಕ್ಕೆ 60 ದಿನ ನಡೆಸಬೇಕೆಂದು ನಾವು ಕಾನೂನಿನಲ್ಲಿ ಒಪ್ಪಿಕೊಂಡಿದ್ದೇವೆ. ಅದರಲ್ಲಿ ಇದು ಸುಮಾರು 50% ಆಗುತ್ತದೆ. ಅಸೆಂಬ್ಲಿ ನಡೆಸದೇ ಹೋದರೆ ತಮಗೆ ಸಮಾಧಾನವಿರುತ್ತದೆಯೇ? ಅಧ್ಯಕ್ಷತೆ ವಹಿಸಿರುವ ನೀವೇ ಹೇಳಿ.

ಶ್ರೀ ವೆಂಕಟರಾವ್ ನಾಡಗೌಡ : ಉತ್ತರ ಕರ್ನಾಟಕದವರಾದ ನಮಗೆ ಅವಕಾಶ ಮಾಡಿಕೊಡಿ.

ಶ್ರೀ ಸಿದ್ದರಾಮಯ್ಯ : ನೋಡಿ, ಉತ್ತರ ಕರ್ನಾಟಕದ ಬಹಳ ಜನ ಶಾಸಕರು ಇನ್ನೂ ಮಾತನಾಡಬೇಕೆಂದಿದ್ದಾರೆ. ಅದಕ್ಕಾಗಿ ಇನ್ನೊಂದು ದಿನ ಸದನವನ್ನು ಎಕ್ಸ್‌ಟೆಂಡ್ ಮಾಡಿ ಎಂದು ನಾನು ಒತ್ತಾಯ ಪೂರ್ವಕವಾಗಿ ಮನವಿ ಮಾಡುತ್ತಿದ್ದೇನೆ. ಇದಕ್ಕೆ ಸರ್ಕಾರದವರನ್ನು ಒಪ್ಪಿಸಿ, ಅವರೂ ಸಹ ಇದರಲ್ಲಿ ಹಠ ಮಾಡಬಾರದು. ಅವರು ಡೆಮಾಕ್ರಸಿಯಲ್ಲಿ ನಂಬಿಕೆ ಇಟ್ಟು ಕೊಂಡಿದ್ದಾರೆ ಎಂದು ನಾನು ಅಂದುಕೊಂಡಿದ್ದೇನೆ. ಅವರು ಒಪ್ಪಿಕೊಳ್ಳುತ್ತಾರೆ ಎಂದು ನಂಬಿದ್ದೇನೆ. ನೀವು ಅವರಿಗೆ ಸ್ಪಷ್ಟವಾಗಿ ನಿರ್ದೇಶನ ಕೊಡಬೇಕು, ನೀವೇ ಇದನ್ನು ತೀರ್ಮಾನ ಮಾಡಿ ಎನ್ನುವುದು ನನ್ನ ಮನವಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಇವತ್ತಿನ ಅಜೆಂಡಾದ ಲ್ಲಿರುವ ಬಿಲ್‌ಗಳನ್ನು ಬೇಕಾದರೆ ನಾಳೆಗೆ ಹಾಕಿ, ನಾವೇನೂ ಬೇಡವೆನ್ನು ವುದಿಲ್ಲ. ಸಿದ್ದರಾಮಯ್ಯನವರು ಹೇಳಿದ ಹಾಗೆ ಒಂದು ದಿನ ಎಕ್ಸ್‌ಟೆಂಡ್ ಮಾಡಿದರೂ ಪರವಾಗಿಲ್ಲ. ಉತ್ತರ ಕರ್ನಾಟಕದ ಜನ ನಿರೀಕ್ಷೆ ಇಟ್ಟುಕೊಂಡಿ ರುವುದು ಎರಡು ವಿಷಯಗಳ ಬಗ್ಗೆ. ಒಂದು ಕೃಷ್ಣಾ ಯೋಜನೆ ವಿಚಾರ, ಇನ್ನೊಂದು ಕುಡಿಯುವ ನೀರಿನ ಬಗ್ಗೆ. 157 ತಾಲ್ಲೂಕುಗಳಲ್ಲಿ ಬರಗಾಲವಿದೆ ಎಂದು ಸರ್ಕಾರ ಈಗಾಗಲೇ ಘೋಷಿಸಿದ್ದು, ಅದರಲ್ಲಿ ಈ ಭಾಗದ 100 ತಾಲ್ಲೂಕುಗಳಲ್ಲಿ ಬರಗಾಲವಿದೆ. ಅದಕ್ಕಾಗಿ ದಯಮಾಡಿ ಎಲ್ಲ ವಿಷಯಗಳನ್ನು ಮುಂದಕ್ಕೆ ಹಾಗಿ ಮೊದಲು ಕೃಷ್ಣಾ ಮತ್ತು ಕುಡಿಯುವ ನೀರಿನ ವಿಚಾರಗಳೆರಡನ್ನೂ ತೆಗೆದುಕೊಳ್ಳಬೇಕೆಂದು ನಾನು ಸಭಾಧ್ಯಕ್ಷರಲ್ಲಿ ಮನವಿ ಮಾಡುತ್ತೇನೆ. ಅದರ ಜೊತೆಗೆ, ನಿನ್ನೆ ಮಂಡಿಸಿರುವ ಸಿ.ಎ.ಜಿ. ವರದಿ ಬಗ್ಗೆ ಸದನದಲ್ಲಿ ಸಮಗ್ರವಾಗಿ ಚರ್ಚೆಯಾಗಬೇಕಾಗಿದೆ. ಇಲ್ಲದಿದ್ದರೆ ರಾಜ್ಯದ ಜನತೆಗೆ ಬೇರೆ ಸಂದೇಶ ಹೋಗುತ್ತದೆ. ಇಷ್ಟೆಲ್ಲಾ ಅನ್ಯಾಯವಾಗಿದೆ ಎಂದು ಸಿ.ಎ.ಜಿ. ವರದಿಯಲ್ಲಿ ಹೇಳಿದ್ದರೂ ವಿರೋಧ–ಪಕ್ಷದವರು ಏನೂ ಮಾತನಾ ಡಲಿಲ್ಲ ಎಂದಾಗುತ್ತದೆ. ಯಾರ್ಯಾರ ಕಾಲದಲ್ಲಿ ಅನ್ಯಾಯವಾಗಿದೆ ಎಂದು ನೋಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳಲಿ, ಅದಕ್ಕೆ ನಮ್ಮದೇನೂ

ಅಭ್ಯಂತರವಿಲ್ಲ. ರಾಜ್ಯದ ಆರು ಕೋಟಿ ಜನ ಈ ಕಡೆ ನೋಡುತ್ತಿದ್ದಾರೆ. ಇವತ್ತು ಎಲ್ಲಾ ಪತ್ರಿಕೆಗಳಲ್ಲಿ ವರದಿಯಾಗಿದೆ. ಆ ಉದ್ದೇಶದಿಂದ ಬಿಲ್ ಗಳನ್ನೆಲ್ಲ ಬೇಕಾದರೆ ನಾಳೆ ಹಾಕಿಕೊಳ್ಳಿ, ಪಾಸ್ ಮಾಡಿಕೊಡುತ್ತೇವೆ, ತೊಂದರೆಯೇನಿಲ್ಲ. ದಯಮಾಡಿ ಮೊದಲು ಕೃಷ್ಣಾ ನ್ಯಾಯಾಧಿಕರಣದ ಬಗ್ಗೆ ಮತ್ತು ಕುಡಿಯುವ ನೀರಿನ ಬಗ್ಗೆ ಚರ್ಚೆ ಮಾಡಬೇಕು. ಕುಡಿಯುವ ನೀರಿನ ಬಗ್ಗೆ ಚರ್ಚೆ ಮಾಡಬೇಕೆಂದು ನಾವು ಕಳೆದ ನಾಲ್ಕೈದು ದಿನಗಳಿಂದ ಪ್ರಯತ್ನ ಮಾಡುತ್ತಿದ್ದೇವೆ. ಚರ್ಚೆಯಾದ ಮೇಲೆ ನಾವು ಒಂದು ನಿರ್ಣಯ ಮಾಡುತ್ತೇವೆ ಎಂದು ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈಗ ಗ್ರಾಮೀಣಾಭಿವೃದ್ಧಿ ಸಚಿವರು ಇಲ್ಲಿದ್ದಾರೆ. ಅದಕ್ಕಾಗಿ ದಯಮಾಡಿ ಕೃಷ್ಣಾ ಮತ್ತು ಕುಡಿಯುವ ನೀರಿನ ವಿಚಾರಗಳನ್ನು ತೆಗೆದುಕೊಳ್ಳಿ, ಬಿಲ್‌ಗಳನ್ನು ನಾಳೆಗೆ ಹಾಕಿಕೊಳ್ಳಿ ಎಂದು ಮನವಿ ಮಾಡಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ, (ಉಪಮುಖ್ಯಮಂತ್ರಿಗಳು ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು ಮತ್ತು ಜೆ.ಡಿ.(ಎಸ್) ನಾಯಕ ರಾದ ರೇವಣ್ಣನವರು ಪ್ರಸ್ತಾಪ ಮಾಡಿರುವುದು ಸರಿಯಿದೆ. ಅದರಲ್ಲೇನೂ ಅನುಮಾನವಿಲ್ಲ. ಆದರೆ ತಮಗೇ ಗೊತ್ತಿರುವ ಪ್ರಕಾರ ಈ ಅಧಿವೇಶನ ನಿನ್ನೆಗೇ ಮುಗಿಯಬೇಕಾಗಿತ್ತು. ನಾವೆಲ್ಲ ಒಟ್ಟಿಗೆ ಸೇರಿ ತೀರ್ಮಾನ ಮಾಡಿದ ಪ್ರಕಾರ ಒಂದು ದಿನ extension ಆಗಿದೆ. ಎಲ್ಲಾ ಶಾಸಕರು ಕೂಡ ಅವರ ವರ ಕ್ಷೇತ್ರಗಳಲ್ಲಿ ಇವತ್ತಿನಿಂದ ಏನು ಪ್ರೋಗ್ರಾಂಗಳನ್ನು ಹಾಕಿಕೊಂಡಿದ್ದರು, ಅವುಗಳನ್ನು ಮುಂದಕ್ಕೆ ಹಾಕಿದ್ದಾರೆ. ನಾಳೆ ಒಂದು ದಿನ ಎಕ್ಸ್‌ಟೆಂಡ್ ಮಾಡಿದರೆ ಅದು ಮುಗಿದು ಹೋಗುತ್ತದೆ ಎಂದು ನನಗನ್ನಿಸುವುದಿಲ್ಲ.; ಹಾಗಾಗಿ, ಅಜೆಂಡಾ ಪ್ರಕಾರ ಆಗಬೇಕಾದಂಥ ಬಿಲ್‌ಗಳು, ಕಾಲಿಂಗ್ ಅಟೆನ್ ಷನ್‌ಗಳನ್ನು ತೆಗೆದುಕೊಂಡು ಇವತ್ತು ದಯವಿಟ್ಟು ಮುಗಿಸಿ, ಅದಾದ ನಂತರ ಮತ್ತೆ ಜನವರಿಯಲ್ಲಿ ಬೇಕಾದರೆ ಒಂದು ವಿಶೇಷ ಅಧಿವೇಶನವನ್ನು ಕರೆಯು ವಂಥ ವ್ಯವಸ್ಥೆಯನ್ನು ಮಾಡುವುದನ್ನು ನಾನು ತಮ್ಮ ವ್ಯಾಪ್ತಿಗೆ ಬಿಡುತ್ತೇನೆ.

ತಾವು ತೀರ್ಮಾನ ಮಾಡಿ, ಅದರ ಪ್ರಕಾರ ಸರ್ಕಾರದವರಾದ ನಾವೂ ಕೂಡ ನಡೆದುಕೊಳ್ಳಲು ತಯಾರಿದ್ದೇವೆ. ಹಾಗಾಗಿ, ದಯವಿಟ್ಟು ಅಜೆಂಡಾ ಪ್ರಕಾರ ಮಾಡಿಕೊಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು : ಅಜೆಂಡಾ ಪ್ರಕಾರ ಹೋಗೋಣ.

ಶ್ರೀ ವೆಂಕಟರಾವ್ ನಾಡಗೌಡ : ಮೊದಲು ಕೃಷ್ಣಾ ವಿಚಾರವನ್ನು ಸಂಪೂರ್ಣ ಮಾಡಿ ಆಮೇಲೆ ಯಾವುದನ್ನಾದರೂ ಮಾಡಿ. ನೀವು ಅದನ್ನು ಮಾಡದಿದ್ದರೆ ನಾವು ಹೊರಗಡೆ ಹೋಗಿ ಉತ್ತರ ಹೇಳುವುದು ಹೇಗೆ? ಇಲ್ಲಿಗೆ ಬಂದೂ ಸಹ ಉತ್ತರ ಕರ್ನಾಟಕದ ಒಂದೂ ಸಮಸ್ಯೆಯನ್ನು ಚರ್ಚೆ ಮಾಡುವುದಕ್ಕೆ ಬಿಟ್ಟಿಲ್ಲವೆಂದರೆ ನಾವು ಜನರಿಗೆ ಏನು ಉತ್ತರ ಹೇಳುವುದು? ದಯವಿಟ್ಟು ಅದನ್ನು ಮೊದಲು ಕಂಪ್ಲೀಟ್ ಮಾಡಿಬಿಡಿ, ಸರ್.

ಶ್ರೀ ಸಿದ್ದರಾಮಯ್ಯ : ಬಿಲ್‌ಗಳನ್ನು ಆಮೇಲೆ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಸಿ.ಟಿ.ರವಿ : ನನ್ನ ಒಂದು ವಿಧೇಯಕವಿದೆ. ಅದನ್ನು ಬೆಳಗ್ಗೆಯೇ ಈ ವಿಚಾರವನ್ನು ತೆಗೆದುಕೊಳ್ಳಿ ಎಂದು ನಿನ್ನೆ ಹೇಳಿದ್ದೀರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮೊನ್ನೆ ಅಪ್ಪರ್ ಕೃಷ್ಣಾ ಬಗ್ಗೆ ಚರ್ಚೆಯಾಗಿ incomplete ಆಗಿದೆಯಲ್ಲ, ಅದನ್ನೇನು ಮಾಡಬೇಕು?

(ಗೊಂದಲ)

ಶ್ರೀ ಸಿ.ಟಿ. ರವಿ : ಇಲ್ಲಿ ಆದಮೇಲೆ, ಅದು ಇಲ್ಲಿಂದ ಕೌನ್ಸಿಲ್‌ಗೆ ಹೋಗಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ : Private institutions ಬರದಿದ್ದರೆ ಆಕಾಶವೇನೂ ಬಿದ್ದು ಹೋಗುವುದಿಲ್ಲ ಬಿಡಿ. ಅಲ್ಲಿಗೆ ಕಳುಹಿಸಿದ ಮೇಲೆ ಅಲ್ಲಿಂದ ಬರಲೇಬೇಕು ಎಂದೇನೂ ಇಲ್ಲ. ಒಂದು ದಿನ ಅಧಿವೇಶನವನ್ನು ಮುಂದಕ್ಕೆ ಹಾಕಿ ಎಂದು ನಮ್ಮ ಎಲ್ಲಾ ಎಂ.ಎಲ್.ಎ.ಗಳ ಕೈಯಲ್ಲಿ ಬರೆಸಿಕೊಡುತ್ತೇನೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ರಾಜ್ಯದಲ್ಲಿ ಗುಡಿಸಿಲಿನಲ್ಲಿ ವಾಸ ಮಾಡುತ್ತಿರುವ ಬಡವರಿಗೆ ಹಕ್ಕುಪತ್ರ ಕೊಡುವ ದಿಕ್ಕಿನಲ್ಲಿ ನಾನು ನಿನ್ನೆ ಪ್ರಸ್ತಾಪ ಮಾಡಿದಾಗ ಮಾನ್ಯ ವಿರೋಧ ಪಕ್ಷದ ನಾಯಕರು ಇವತ್ತು ಬೇಡ, ನಾಳೆ ಖಂಡಿತವಾಗಿ ಮಾಡೋಣ ಎಂದು ಹೇಳಿದರು.

ಶ್ರೀ ಸಿದ್ದರಾಮಯ್ಯ : ಈಗಲೂ ಅದನ್ನು ಮಾಡುವುದಕ್ಕೆ ತಯಾರಾಗಿದ್ದೇವೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಬೆಳಗ್ಗೆ ಬರುತ್ತಿದ್ದ ಹಾಗೆ ಪ್ರಾರಂಭದಲೇ ಇದಕ್ಕೆ ಅವಕಾಶ ಮಾಡಿಕೊಡುತ್ತೇವೆ ಎಂದೂ ಹೇಳಿದ್ದಿರಿ. ಅದಕ್ಕೋಸ್ಕರ ಹೇಳುತ್ತಿದ್ದೇನೆ, ಮೊದಲು ದಯವಿಟ್ಟು ಬಿಲ್‌ಗಳಿಗೆ ಅವಕಾಶ ಮಾಡಿಕೊಡಿ. ಕೂಡಲೇ ಶುರು ಮಾಡೋಣ. ಸುಮ್ಮನೆ ಇದರಲ್ಲೇ ಸಮಯವನ್ನು ಕಳೆಯುವುದು ಬೇಡ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಬಿಲ್‌ಗಳ ಬಗ್ಗೆ ಆತುರವೇಕೆ?

ಶ್ರೀ ಕೆ.ಎಸ್. ಈಶ್ವರಪ್ಪ : ಬಿಲ್‌ಗಳ ಬಗ್ಗೆ ಅಲ್ಲ, ಬಡವರ ಬಗ್ಗೆ ಆತುರ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಹಾಗಿದ್ದರೆ ನಾಳೆಯೂ ಮಾಡುತ್ತಾರೆ ಕೇಳಿ. ನಾಳೆಯೂ ಚರ್ಚೆ ಮಾಡೋಣ.

ಶ್ರೀ ಬಂಡೆಪ್ಪ ಖಾಶೆಂಪೂರ್ : ನಿನ್ನೆ ಅಷ್ಟು ಗಲಾಟೆಯಾದ ಮೇಲೂ ಮತ್ತೆ ಈಗ ಗೋ ಹತ್ಯೆ ಬಿಲ್ ತಂದಿದ್ದಾರೆ. ಹೀಗಿರುವಾಗ ಸದನ ಸ್ಮೂತ್ ಆಗಿ ನಡೆಯಬೇಕೆಂದರೆ ಹೇಗೆ ನಡೆಯುತ್ತದೆ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನೀವು ಹೇಳಿದ ಹಾಗೆ ಕೇಳಿಕೊಂಡು ಇರುವುದಕ್ಕಾಗಿಯೇ ನಾವು ಇಲ್ಲಿ ಬಂದಿರುವುದು. ಗೋ ಹತ್ಯೆ ನಿಷೇಧ ನಮ್ಮ

ಸರ್ಕಾರದ ಇಚ್ಛೆಯಾಗಿದೆ. ನಿಶ್ಚಿತವಾಗಿ ಆ ಬಿಲ್ ಅನ್ನು ನಾವು ಮಾಡಿಯೇ ಮಾಡುತ್ತೇವೆ.

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ : ನಿಮಗೆ ಸದನ ನಡೆಸುವುದು ಬೇಕಾಗಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅಧ್ಯಕ್ಷರೆ, ಅದನ್ನು ತೀರ್ಮಾನ ಮಾಡಬೇಕಾಗಿರುವವರು ನೀವು. You give the direction.

(ಗೊಂದಲ)

Mr.SPEKER : With the co-operation of the all the members.

SRI SIDDARAMAIAH : You please give the direction. It is in your court. You have got all the powers to give the directions to the Government.

ಅಧ್ಯಕ್ಷರು : ಎಲ್ಲ ಸದಸ್ಯರ ಸಹಕಾರ ಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾಳೆಯೂ ಸದನ ನಡೆಸಿ ಎಂದು ನಾನು ಎಲ್ಲ ಸದಸ್ಯರಿಂದ ಬರೆಸಿಕೊಡುತ್ತೇನೆ.

ಶ್ರೀ ಬಂಡೆಪ್ಪ ಖಾಶೆಂಪೂರ್ : ನಮ್ಮ ಎಲ್ಲ 26 ಶಾಸಕರೂ ಕೂಡ ನಮಗೆ ಒಪ್ಪಿಗೆ ಇದೆ ಎಂದು ಬರೆದು ಕೊಡುತ್ತೇವೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಮ್ಮೆಲ್ಲ ಸದಸ್ಯರ ಭಾವನೆಗಳನ್ನು ಅರ್ಥ ಮಾಡಿಕೊಂಡು ಅಜೆಂಡಾ ಪ್ರಕಾರ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ತಾವು ಮುಂದಾಗಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಯಾರು ಮುಖ್ಯಮಂತ್ರಿಗಳಾಗಿದ್ದರು ಅವರ ಮೇಲೆ ಸಿ.ಎ.ಜಿ. ರಿಪೋರ್ಟ್ ಇದೆ. ಅದನ್ನು ಎಕ್ಸ್‌ಪೋಸ್ ಮಾಡಿದರೆ ನಿಮಗೂ ಅನುಕೂಲವಾಗುತ್ತದೆ.

(ಗೊಂದಲ)

ಅಧ್ಯಕ್ಷರು : ಇನ್ನೂ ಒಂದು ಪ್ರಶ್ನೆ ಏನೆಂದರೆ, ಜಿಲ್ಲಾಧಿಕಾರಿಗಳು ನಮಗೆ ಉಳಿದುಕೊಳ್ಳಲು ಹೋಟೆಲ್‌ಗಳನ್ನು ರಿಸರ್ವ್ ಮಾಡಿದ್ದುದು ನಿನ್ನೆಗೇ ಮುಗಿದಿತ್ತು, ಒಂದು ದಿವಸ ಮತ್ತೆ ಎಕ್ಸ್‌ಟೆಂಡ್ ಮಾಡಿಸಿದ್ದಾರೆ.

ಶ್ರೀ ಸಿದ್ದರಾಮಯ್ಯ : ಹೋಟೆಲ್‌ನವರು ನನಗೆ ಪರಿಚಯವಿದ್ದಾರೆ, ನಾನು ಹೋಟೆಲ್‌ನವರಿಗೆ ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು : ಅಡುಗೆ ಟೆಂಡರ್ ಕೊಟ್ಟಿದೆ. ಈಗ ಮತ್ತೆ extension ಎಂದರೆ ಕಷ್ಟ ಆಗುತ್ತದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಒಂದು ದಿನ extend ಮಾಡಿ ಪರವಾಗಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಊಟವು ಬೇಡ, ಊಟವನ್ನು ನಾವೇ ತರಿಸಿಕೊಳ್ಳುತ್ತೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : Don't worry about it.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ದಯವಿಟ್ಟು agenda ಪ್ರಕಾರ ಹೋಗೋಣ.

(ಗೊಂದಲ)

ಅಧ್ಯಕ್ಷರು : ಈಗ ನಾವು MLA ಗಳು ಇರಬಹುದು. ಆದರೆ, employeesಗೆ ತೊಂದರೆಯಾಗುತ್ತದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : University Guest House ನಲ್ಲಿ ಅವಕಾಶ ಮಾಡಿಕೊಡುವುದಕ್ಕೆ ನಾನು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು : Employess ಇದ್ದಾರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಇವೆಲ್ಲಾ ಒಣ ಚರ್ಚೆ ಮಾಡಿಕೊಂಡಿರುವುದಕ್ಕಿಂತಲೂ ಅಧಿವೇಶನ ಇವತ್ತು ಮುಕ್ತಾಯವಾಗುತ್ತದೆಂಬುದು ನಮಗೆಲ್ಲರಿಗೂ ಗೊತ್ತಿದೆ. ಸಮಯವನ್ನು ವ್ಯರ್ಥ ಮಾಡದೆ ತಾವು agenda ಪ್ರಕಾರ ಚರ್ಚೆಗೆ ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಿಮಗೆ ಏನು ಗೊತ್ತಿದೆ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅನಗತ್ಯವಾಗಿ ಸಮಯ ವ್ಯರ್ಥವಾಗುತ್ತಿದೆ. ಸಿದ್ದರಾಮಯ್ಯನವರೆ, ತಾವು ಹಿರಿಯರಿದ್ದೀರಿ, ತಾವು ವಿರೋಧ ಪಕ್ಷದ ನಾಯಕರಾಗಿದ್ದೀರಿ, ತಮಗೆ ಗೊತ್ತಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅದಕ್ಕೇ ಹೇಳುತ್ತಿರುವುದು. ಹಾಗಾದರೆ, ಚರ್ಚೆ ಮಾಡದೆ ಹಾಗೆಯೇ ಮನೆಗೆ ಹೊರಟುಹೋಗುವುದೇ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಎಲ್ಲಿ ಚರ್ಚೆ ಮಾಡುವುದು? Upper Krishna ಬಗ್ಗೆ ಇನ್ನೂ ಉತ್ತರ ಕೊಟ್ಟಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಉತ್ತರ ಕೊಡುವುದಕ್ಕೆ ಸಿದ್ದವಾಗಿದ್ದಾರೆ.

ಶ್ರೀ ಸಿದ್ದರಾಮಯ್ಯ : ಉತ್ತರ ಕೊಡಿ ಮೊದಲು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಕೊಡುತ್ತಾರೆ. ಮೊದಲು ಬಿಲ್ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಸಿದ್ದರಾಮಯ್ಯ : Discussion is in complete.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಬಿಲ್ ಅನ್ನು ಚರ್ಚೆಗೆ ತೆಗೆದು ಕೊಂಡು ಮೊದಲು ಮುಗಿಸೋಣ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅದಕ್ಕೇ ಅಧಿವೇಶನವನ್ನು ಒಂದು ದಿನ ವಿಸ್ತರಿಸಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಿಮ್ಮ ಬಿಲ್‌ಗಳನ್ನೇ ಮೊದಲು ತೆಗೆದು ಕೊಳ್ಳೋಣ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಹಾಗಾದರೆ ನಾಳೆ ಒಂದು ದಿನಕ್ಕೆ ಅಧಿವೇಶನ ವಿಸ್ತರಿಸಲು ಒಪ್ಪಿಕೊಳ್ಳಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಇದೆಲ್ಲ ಆಗದಿದ್ದ ವಿಷಯ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಸುಮ್ಮನೇಕೆ ಚರ್ಚೆ ಮಾಡುತ್ತೀರಿ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾಳೆ ಒಂದು ದಿನ ಅಧಿವೇಶನ ವಿಸ್ತರಿಸಲು ಒಪ್ಪಿಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಅಧಿವೇಶನ ವಿಸ್ತರಿಸುವುದರಿಂದ ವ್ಯವಸ್ಥೆ ಕಷ್ಟವಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಏನೂ ಆಗುವುದಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : We are ready to undergo.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಟಿಕೆಟ್ ಬುಕ್ ಮಾಡಿದ್ದಾರೆ, ಬುಕ್ ಮಾಡಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಏನಾದರೂ ತೊಂದರೆಯಾಗಲಿ ಅದನ್ನು ನಾವು ಸಹಿಸಿಕೊಳ್ಳುತ್ತೇವೆ.

(ಗೊಂದಲ)

ಅಧ್ಯಕ್ಷರು : Employess ಗೆ ತೊಂದರೆಯಾಗುತ್ತದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಹಾಗಾದರೆ ನಾವೆಲ್ಲ ಹೊರಗಡೆ ಹೋಗುತ್ತೇವೆ. ನೀವೇ ಮಾಡಿಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಇದು ಸರಿಯಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : We boycott the House.

(ಗೊಂದಲ)

ಶ್ರೀ ಕೆಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಇದು ನ್ಯಾಯವಲ್ಲ. ಇವರು ಹೇಳಿದ ಹಾಗೇ ಕೇಳಬೇಕು. ಇವರು ಹೇಳಿದ ಬಿಲ್ ಅನ್ನೇ ಚರ್ಚೆಗೆ ತೆಗೆದುಕೊಳ್ಳಬೇಕೆ? ಇವರೇನು dictators?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಹಾಗಾದರೆ ಎಲ್ಲಾ ಮಾಡಿಕೊಳ್ಳಿ. ಏನು ಮಾಡುವುದು? ನಿಮ್ಮ ಕೈಯಲ್ಲಿ ಅಧಿವೇಶನವನ್ನು ಒಂದು ದಿವಸ ಮುಂದಕ್ಕೆ ಹಾಕುವುದಕ್ಕೆ ಆಗುವುದಿಲ್ಲವೇ?

(ಗೊಂದಲ)

ಶ್ರೀ ಸಿದ್ದರಾಮಯ್ಯ : Is it not your duty?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಸರ್ಕಾರವಾಗಿ ನಮಗೇನು ಹಕ್ಕಿದೆ, ಅದನ್ನು ಮಾಡುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು : Please, ಬೇಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಯಾವುದು ಸರ್ಕಾರ? Where is the Government? Where is the governacce?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನೀವು ಹೇಳುವುದನ್ನು ನೀವು ಹೇಳಿ, ನಾವು ಮಾಡುವುದನ್ನು ನಾವು ಮಾಡುತ್ತೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾವೆಲ್ಲ ಊರಿಗೆ ಹೋಗುತ್ತೇವೆ, ಇವರು ನಡೆಸಿಕೊಳ್ಳಲಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : You do not believe in parliament ary system of Government. You do not believe in democracy. You do not have respect for the Constitution, ಮಾಡಿಕೊಳ್ಳಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ: ಇತಿಹಾಸದಲ್ಲಿ ಅತ್ಯಂತ ಕಡಿಮೆ ಸದನ ನಡೆಸಿಕೊಂಡು ಬಂದಿರತಕ್ಕಂಥದ್ದು.

(ಗೊಂದಲ)

ಅಧ್ಯಕ್ಷರು : ವ್ಯವಸ್ಥೆಗೆ ಬಹಳ ಕಷ್ಟವಾಗುತ್ತದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಿನ್ನೆ ಸರ್ಕಾರ ಎರಡು report ಗಳನ್ನು ಮಂಡಿಸಿದೆ. ನೀವು ನೋಡಿದ್ದೀರಾ? ಅದರ ಬಗ್ಗೆ ಚರ್ಚೆ ಮಾಡಬೇಕೋ, ಬೇಡವೋ? ಬೇಡವೆಂದರೆ ಬೇಡ.

(ಗೊಂದಲ)

ಅಧ್ಯಕ್ಷರು : ತಕ್ಷಣ ಬೇಕಾದರೆ ಜನವರಿಯಲ್ಲಿ ಕರೆಯುವುದಾದರೆ ಕರೆಯೋಣ.

(ಗೊಂದಲ)

ಅಧ್ಯಕ್ಷರು : ಜನವರಿ ಮೊದಲನೇ ವಾರದಲ್ಲಿ ಬೆಂಗಳೂರಿನಲ್ಲಿ ಸದನ ಕರೆಯೋಣ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇಷ್ಟೊಂದು ಕೋಟಿಗಟ್ಟಲೆ ಹಣ ತಿಂದಿದ್ದಾರೆ, ಕೋಟಿಗಟ್ಟಲೆ ಹಣ ಲೂಟಿಯಾಗಿದೆ, ಸರ್ಕಾರದ ಬೊಕ್ಕಸಕ್ಕೆ ಬರಬೇಕಾದ ಕೋಟಿಗಟ್ಟಲೆ ಹಣವನ್ನು ಯಾರ್ಯಾರೋ ತಿಂದು ಹಾಕಿದ್ದಾರೆ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಟೈಂ ಇಲ್ಲವೆಂದರೆ, ಇನ್ನು ಯಾವುದರ ಬಗ್ಗೆ ಚರ್ಚೆ ಮಾಡುವುದು? For what purpose…..this. House is? ಮಾನ್ಯ ಅಧ್ಯಕ್ಷರೆ, ಇದಕ್ಕೆಲ್ಲ ನಾವು ಒಪ್ಪುವುದಕ್ಕಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಇಲ್ಲಿಯ ವ್ಯವಸ್ಥೆಗೆ ಬಹಳ ತೊಂದರೆಯಾಗುತ್ತದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾವು walk out ಮಾಡುತ್ತೇವೆ. ನಾವು walk out ಅಲ್ಲ, boycott ಮಾಡುತ್ತೇವೆ. ನಮ್ಮ boycott ನಲ್ಲಿಯೇ ನೀವು ಮಾಡಿಕೊಂಡು ಹೋಗಿ, ಅದು ಏನು ಮಾಡಿಕೊಂಡು ಹೋಗುತ್ತೀರೋ ಮಾಡಿಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಈಗ bill pass ಮಾಡಿಕೊಂಡು ಹೋಗಿ, ಅದು ಏನು ಮಾಡಿಕೊಳ್ಳುತ್ತೀರೋ ಮಾಡಿಕೊಂಡು ಹೋಗಿ. ನನಗೆ ಚರ್ಚೆ ಮಾಡಲು ಅವಕಾಶ ಕೊಡಲಿಲ್ಲವೆಂದರೆ boycott ಮಾಡುತ್ತೇವೆ. ಇದು Government? ಇದನ್ನು democracy ಎಂದು ಕರೆಯುತ್ತಾರೆಯೇ? BAC meeting ಕರೆಯಿರಿ ಸ್ವಾಮಿ. ಈಗ BAC meeting ಕರೆಯಿರಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈಗ ಹೋಗುತ್ತೀರೋ, ಇಲ್ಲವೋ? ಅದನ್ನು ಹೇಳಿಬಿಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : Rule 69 ನಲ್ಲಿ ಚರ್ಚೆಗೆ ನೋಟಿಸ್ ಕೊಟ್ಟಿದ್ದೇವೆ. Upper Krishna ಬಗ್ಗೆ ಚರ್ಚೆ ಮಾಡಿ ಅದಕ್ಕೆ ಉತ್ತರ ಕೊಡಬೇಕಾಗಿದೆ. ಚಾಮುಂಡಿ ಬೆಟ್ಟದಲ್ಲಿದ್ದ ಸರ್ಕಾರಿ ಭೂಮಿಯನ್ನು ಕಬಳಿಸಿದ ಬಗ್ಗೆ ಚರ್ಚೆ ಮಾಡಲು ನೋಟಿಸ್ ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಎಲ್ಲಿ ಕೊಟ್ಟಿದ್ದೀರಿ, ಕೊಟ್ಟಿಲ್ಲ.

ಶ್ರೀ ಸಿದ್ದರಾಮಯ್ಯ : ಕೊಟ್ಟಾಗಿದೆ. ನಿಮಗೆ ಗೊತ್ತಿಲ್ಲ. ನಾವು ನಿನ್ನೆ ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಅವೆಲ್ಲ ನಿಮಗೆ ಆಸಕ್ತಿ ಇಲ್ಲ. ರಾಜಕಾರಣ ಮಾಡುವುದಕ್ಕೆ ಅಷ್ಟೆ ಇರುವುದು. ಚಾಮುಂಡಿ ಬೆಟ್ಟದಲ್ಲಿ ಎರಡು ಸಾವಿರ ಎಕರೆ ಜಾಗ ಹೋಗಿದೆ ಎಂದು ನಾವು ಹೇಳಬೇಕಾದರೆ ಇವರು ಮಲಗಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : Adjournment motion ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಅದನ್ನು ಪ್ರಸ್ತಾಪವೇ ಮಾಡಲಿಲ್ಲವಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : Adjournment motion ಪ್ರಸ್ತಾಪ ಮಾಡಿದಿರಾ?

ಶ್ರೀ ಸಿದ್ದರಾಮಯ್ಯ : ಹೌದು.

ಶ್ರೀ ಕೆ.ಎಸ್. ಈಶ್ವರಪ್ಪ : ಯಾವಾಗ? ಎಲ್ಲಿ ಮಾಡಿದಿರಿ?

ಶ್ರೀ ಸಿದ್ದರಾಮಯ್ಯ : ನಿನ್ನೆ ಮಾಡಿದೆವು. ಆಗ ನೀವು ಇರಲಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಬೇಕಾದರೆ, Speaker ರವರಿಗೆ ಕೇಳಿ.

ಅಧ್ಯಕ್ಷರು : ನಿನ್ನೆ ಪ್ರಸ್ತಾಪ ಮಾಡಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾವು ಪ್ರಸ್ತಾಪ ಮಾಡಿರುವುದು ನಿಮಗೆ ಗೊತ್ತಿಲ್ಲ, ನೀವು ಸರಿಯಾಗಿ Assembly ಗೆ ಬರುವುದಿಲ್ಲ.

(ಗೊಂದಲ)

(ಈ ಹಂತದಲ್ಲಿ ಶ್ರೀ ವೆಂಕಟರಾವ್ ನಾಡಗೌಡ ಮತ್ತು ಶ್ರೀ ಎ.ಎಸ್. ನಡಹಳ್ಳಿಯವರು ಉತ್ತರ ಕರ್ನಾಟಕದ ನೀರಾವರಿ ಕುರಿತಂತೆ ಚರ್ಚೆ ಮಾಡಲು ಅವಕಾಶ ಕೊಡಬೇಕೆಂದು ಸದನದ ಬಾವಿಗೆ ಬಂದರು)

(ಗೊಂದಲ)

(ಈ ಹಂತದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದಿಂದ ಹೊರ ನಡೆದರು)

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಬೆಳಗಾವಿಯಲ್ಲಿ ಸದನ ಕರೆದಿರುವ ಉದ್ದೇಶವೇನು ಎಂದು ಈ ಸರ್ಕಾರ ತಿಳಿಸಬೇಕಾಗುತ್ತದೆ. ಬೆಳಗಾವಿಯಲ್ಲಿ ಸದನ ಕರೆದಿರುವ ಉದ್ದೇಶವೇನೆಂದರೆ, ಉತ್ತರ ಕರ್ನಾಟಕ ಭಾಗದ ಜನತೆಯ ಕಳೆದ 50 ವರ್ಷಗಳಲ್ಲಿ ಆಗದಿರುವಂಥ ಕೆಲಸ ಕಾರ್ಯಗಳ ದೃಷ್ಟಿಯಲ್ಲಿ ಇವತ್ತು ಉತ್ತರ ಕರ್ನಾಟಕದಲ್ಲಿ ಸದನ ಮಾಡ ಬೇಕೆಂದು ಕುಮಾರಸ್ವಾಮಿಯವರು ಇದ್ದಾಗ ಮಾಡಿದರು. ಆದರೆ, ನೀವು ಕಳೆದ 5 ದಿವಸಗಳಿಂದ ಉತ್ತರ ಕರ್ನಾಟಕದ ಬಗ್ಗೆ ಚರ್ಚೆಯೇ ಇಲ್ಲ. Krishna Basin ಮೇಲೆ 1964 ರಿಂದ 48 ವರ್ಷಗಳು ಏನಾಗಿದೆ ಎಂದು ನಿಮಗೆ ಗೊತ್ತಿದೆ. ಅದಕ್ಕೆ ನೀವು priority ಕೊಡದೆ ಯಾವುದೋ 4 Bill ಗಳನ್ನು pass ಮಾಡಿಕೊಂಡು ನೀವು ವ್ಯವಸ್ಥೆ ಮಾಡಬೇಕೆನ್ನುವುದಾದರೆ ಇದರ ಅರ್ಥ ಏನು? ಇವತ್ತು ಸುಮಾರು 157 ತಾಲ್ಲೂಕುಗಳಲ್ಲಿ ಬರಗಾಲವಿದೆ. ಕುಡಿಯುವ ನೀರಿನ ಸಲುವಾಗಿ ಚರ್ಚೆ ಮಾಡುವುದಕ್ಕೆ ನಾವು ಒಂದು ವಾರದಿಂದ ಅವಕಾಶ ಕೇಳುತ್ತಿದ್ದೇವೆ. ಇದೆಲ್ಲ ಬಿಟ್ಟು ನೀವು ಯಾವುದೋ Bill pass ಮಾಡಿಕೊಳ್ಳುವುದು, ಯಾವುದೋ ಒಂದು ಸಮಾಜವನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡುವುದಕ್ಕೆ ಹೋಗಬಾರದು. Election ದೃಷ್ಟಿ ಇಟ್ಟುಕೊಂಡು ದಯವಿಟ್ಟು ಮಾಡಬಾರದು. ಏಕೆಂದರೆ, Bill pass ಮಾಡುವಾಗ ನೀವು ವಿರೋಧ ಪಕ್ಷದವರನ್ನೆಲ್ಲ ವಿಶ್ವಾಸಕ್ಕೆ ತೆಗೆದುಕೊಂಡು ಮಾಡುವುದು ಒಳ್ಳೆಯದು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಸರ್ಕಾರ ಉತ್ತರ ಕರ್ನಾಟಕದ ವಿಷಯ ಕುರಿತು ಒಂದು ವಾರದಿಂದ ಚರ್ಚೆ ಮಾಡಬೇಡಿ ಎಂದು ನಾವು

ಹೇಳಿದ್ದೇವೆಯೇ? ಕುಡಿಯುವ ನೀರಿನ ಕುರಿತು ಚರ್ಚೆ ಮಾಡುವುದು ಬೇಡ ಎಂದು ಹೇಳಿದ್ದೇವೆಯೇ?

ಶ್ರೀ ಕೆ.ಎಸ್. ಈಶ್ವರಪ್ಪ : ರಾಜಕಾರಣ ಮಾಡುತ್ತಿರುವುದು ನೀವಾ? ನಾವಾ?

ಶ್ರೀ ಹೆಚ್.ಡಿ. ರೇವಣ್ಣ : ನಾವು ರಾಜಕಾರಣ ಮಾಡಿದ್ದಲ್ಲ, ನೀವು ಈಗ ಈ Bill ನ್ನು ತಂದು ಕೂಡಲೆ pass ಮಾಡುವ ಅವಶ್ಯಕತೆ ಇತ್ತೇ?

ಶ್ರೀ ಕೆ.ಎಸ್. ಈಶ್ವರಪ್ಪ : ಯಾವುದೋ ಒಂದು ವರ್ಗವನ್ನು ತೃಪ್ತಿಪಡಿಸಬೇಕೆನ್ನುವವರು ನಾವಲ್ಲ. ಮುಸಲ್ಮಾನರನ್ನು ತೃಪ್ತಿಪಡಿಸಬೇಕೆಂದು ಆತುರದಿಂದ ಇರುವವರು ನೀವು.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ದಯವಿಟ್ಟು ಈ ಮಾತನ್ನು ಹೇಳಬೇಡಿ. ಉತ್ತರ ಕರ್ನಾಟಕದ ಬಗ್ಗೆ ಮಾತನಾಡಿ ಎಂದು ನಾವು ಪ್ರಾರಂಭದ ದಿನದಿಂದಲೇ ಹೇಳುತ್ತಿದ್ದೇವೆ. ಈಗ ಕೊನೆಯ ದಿವಸ ಉತ್ತರ ಕರ್ನಾಟಕದ ನೆಪ ಹೇಳಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಲ್ಲ, ಇದು ಯಾವಸೀಮೆರಾಜಕಾರಣ? ಇದು ರಾಜಕಾರಣವಲ್ಲ. ಕಾಂಗ್ರೆಸ್ ಇರಬಹುದು, ಜೆಡಿ(ಎಸ್) ಇರಬಹುದು. ಉತ್ತರ ಕರ್ನಾಟಕದ ಬಗ್ಗೆ ನೆಪ ಹೇಳಿಕೊಂಡು ಹೊರಟಿದ್ದೀರಿ. ಇಷ್ಟು ದಿವಸ ಏಕೆ ಉತ್ತರ ಕರ್ನಾಟಕದ ಬಗ್ಗೆ ನಿಮಗೆ ನೆನಪಾಗಲಿಲ್ಲ? ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಮಾಡಬೇಡಿ ಎಂದು ನಾವು ಹೇಳಿದ್ದೇವೆಯೇ? ಉತ್ತರ ಕರ್ನಾಟಕದ ಬಗ್ಗೆ ಮಾತನಾಡಿ ಎಂದು ನಾವು ಸರ್ಕಾರದ ಕಡೆಯಿಂದ ವಿರೋಧ ಪಕ್ಷದವರಿಗೆ ಪ್ರತಿ ದಿವಸ ಹೇಳಿದ್ದೇವೆ. ಆಗ ನಿಮಗೆ ನೆನಪಾಗಲಿಲ್ಲ. ಹೋಗುವ ದಿನ ನೆನಪು ಮಾಡಿಕೊಂಡಿದ್ದೀರಿ. ಚುನಾವಣೆ ಹತ್ತಿರ ಬರುತ್ತಿದೆ, ಉತ್ತರ ಕರ್ನಾಟಕದ ಜನತೆಗೆ ಹೇಗೆ ಮುಖ ತೋರಿಸಬೇಕು, ಅದಕ್ಕೋಸ್ಕರ ಸಭಾತ್ಯಾಗ ಮಾಡುವುದಕ್ಕೆ ಹೋಗಿ boycott ಮಾಡುತ್ತೇವೆಂದು, ಇದು ಯಾವ ಸೀಮೆಯ ರಾಜಕಾರಣ?

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ : ಚರ್ಚೆ ಮಾಡುವುದಿಲ್ಲವೆಂದು ಯಾವಾಗ ಹೇಳಿದ್ದು?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ನೀವು ಚರ್ಚೆಯಲ್ಲಿ ಭಾಗವಹಿಸುತ್ತೀರೋ, ಹೊರಗೆ ಹೋಗುತ್ತಿರೋ? ಏನಾದರೊಂದು ತೀರ್ಮಾನ ಮಾಡಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಿಮಗೆ ಚರ್ಚೆ ಬೇಡ. ನಿಮಗೆ ಕಲಾಪ ನಡೆಯುವುದು ಬೇಡ. ಜನರ ಹಿತ ಬೇಡ. ಏನೂ ಬೇಡ. ಸುಮ್ಮನೆ ರಾಜಕಾರಣ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಎಸ್.ಕೆ. ಬೆಳ್ಳುಬ್ಬಿ (ಹಜ್ ಮತ್ತು ವಕ್ಫ್ ಸಚಿವರು) : ಉತ್ತರ ಕರ್ನಾಟಕದ ಪ್ರಮುಖ ನೀರಾವರಿ ಯೋಜನೆಗಳನ್ನು ಜಾರಿಗೆ ತಂದಿರುವಂಥದ್ದು ಇದೆ. ಈ ಐತಿಹಾಸಿಕ ಅಧಿವೇಶನ ನಡೆಸುತ್ತಿದೆ. ಇದನ್ನು ಕಾಂಗ್ರೆಸ್ ಮತ್ತು ಜೆ.ಡಿ.(ಎಸ್)ನವರಿಗೆ ಸಹಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾತನಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು : Agenda ಪ್ರಕಾರ ಹೋಗೋಣ.

(ಗೊಂದಲ)

ಅಧ್ಯಕ್ಷರು : please, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಉಪ ಮುಖ್ಯಮಂತ್ರಿಯವರಲ್ಲಿ ನಾನು ಮನವಿ ಮಾಡುವುದಿಷ್ಟೇ. ಮಾನ್ಯ ಅಧ್ಯಕ್ಷರೆ, ಈ ಸಭೆಯನ್ನು ಅರ್ಧ ಗಂಟೆ ಮುಂದಕ್ಕೆ ಹಾಕಿ. ಎಲ್ಲಾ ವಿರೋಧ ಪಕ್ಷದವರನ್ನು ಕರೆಸಿ, ಉತ್ತರ

ಕರ್ನಾಟಕದ ಕೃಷ್ಣಾ ನದಿಯ ಬಗ್ಗೆ ಇರಬಹುದು, ಕುಡಿಯುವ ನೀರಿನ ಬಗ್ಗೆ ಇರಬಹುದು, ಅದರ ಬಗ್ಗೆ ಚರ್ಚೆಯಾಗಬೇಕು. ನಾವೇನೂ CAG ವರದಿಯನ್ನು ಮಂಡಿಸಿ ಎಂದು ಹೇಳಿಲ್ಲ. CAG ವರದಿಯ ಪ್ರಕಾರ ಯಾರು ತಪ್ಪು ಮಾಡಿದ್ದಾರೆ. ಅದರ ಬಗ್ಗೆ ಚರ್ಚೆಯಾಗಬೇಕು.

ಶ್ರೀ ವೆಂಕಟರಾವ್ ನಾಡಗೌಡ : ನೀರಾವರಿ ಬಗ್ಗೆ ಚರ್ಚಿಸಲು ನೀವು ಅವಕಾಶ ಕೊಡಿ, ನಾವು ಚರ್ಚೆ ಮಾಡುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ : Wrong message ಹೋಗಬಾರದು. ನೀವು ತಪ್ಪು ಮಾಡಿರುವುದನ್ನು ಮುಚ್ಚಿಕೊಳ್ಳುವುದಕ್ಕೋಸ್ಕರ. . . . ನಿನ್ನೆ CAG ವರದಿಯನ್ನು ಏಕೆ ಮಂಡಿಸಿದಿರಿ? ಇಷ್ಟೆಲ್ಲಾ ಆದರೂ ಸಭೆಯನ್ನು ಮುಂದೂಡುವುದು ಒಳ್ಳೆಯದು. ಇಲ್ಲವೆಂದರೆ ನಾವು ಸದನವನ್ನು boycott ಮಾಡಬೇಕಾಗುತ್ತದೆ. ಇದು ದುರುದ್ದೇಶಪೂರ್ವಕವಾಗಿ. . .

ಶ್ರೀ ಬಂಡೆಪ್ಪ ಖಾಶೆಂಪೂರ್ : ಅವರನ್ನು BAC ಗೆ ಕರೆಸಿ, ಸಭೆಯನ್ನು ಅರ್ಧ ಗಂಟೆ ಸಭೆಯನ್ನು ಮುಂದಕ್ಕೆ ಹಾಕಿ.

(ಈ ಹಂತದಲ್ಲಿ ಜೆ.ಡಿ.(ಎಸ್) ಪಕ್ಷದ ಸದಸ್ಯರು ಸದನವನ್ನು boycott ಮಾಡಿದರು)

4. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು :

ಕಾರ್ಯದರ್ಶಿ : ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ 2012ನೇ ಸಾಲಿನ ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ವಿಧೇಯಕವನ್ನು ಸಭೆಯ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

(ಅನುಬಂಧ–1)